**ದಿನಾಂಕ 11.09.2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ. ಹೆಚ್.ಎನ್.ಬಿ.ಎನ್. - 3 ನೇ ಎದುರುದಾರರ ಪರ ವಕೀಲರಿಂದಃ**

ನಾನು ಮತ್ತು ಅರ್ಜಿದಾರ ಒಂದೇ ಗ್ರಾಮದವರು ಎಂದರೆ ಸರಿ. ನಾನು ಎಸ್.ಎಸ್.ಎಲ್.ಸಿ. ವರೆಗೆ ವ್ಯಾಸಂಗ ಮಾಡಿದ್ದೇನೆ. ದಿನಾಂಕ 31.01.2020 ರಂದು ಬೆಳಗ್ಗೆ 8.00 ಗಂಟೆಗೆ ಅಪಘಾತವಾಗಿದೆ. ಆ ದಿನ ನಾನು ಬೆಳಿಗ್ಗೆ 7.45 ಗಂಟೆಗೆ ನನ್ನ ಮನೆಯಿಂದ ಕೂಲಿ ಕೆಲಸಕ್ಕೆ ಹೆಮ್ಮಿಗೆ ಗೇಟ್ ಬಳಿ ಹೋಗುತ್ತಿದ್ದೆ.

ನಾನು ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ವಿ-8212 ರಲ್ಲಿ ಹೋಗುತ್ತಿದ್ದರು. ಅವರಿಗೆ ಅಪಘಾತ ಮಾಡಿದ ಮತ್ತೊಂದು ಮೋಟಾರ್ ಸೈಕಲ್ ಸಂಖ್ಯೆ ಕೆಎ-55/ಡಬ್ಲ್ಯೂ-9630 ಆಗಿರುತ್ತದೆ. ಅಪಘಾತದ ವೇಳೆಗೆ ನನ್ನ ಜೊತೆ ನಮ್ಮ ಗ್ರಾಮದ ರಾಜಣ್ಣ ಎನ್ನುವವರು ಇದ್ದರು. ಅಪಘಾತವು ಅರ್ಜಿದಾರನ ತಪ್ಪಿನಿಂದ ಅಗಿದೆ ವಿನಹ ಒಂದನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

ಅರ್ಜಿದಾರರು ಸುಮಾರು 3-4 ಲಕ್ಷದವರೆಗೆ ವೈದ್ಯಕೀಯ ಚಿಕಿತ್ಸೆಗೆ ಖರ್ಚು ಮಾಡಿರುತ್ತಾರೆ. ಆ ಕುರಿತು ವೈದ್ಯಕೀಯ ದಾಖಲೆ ನೋಡಿರುತ್ತೇನೆ. ಅವರು ನಮ್ಮ

ಗ್ರಾಮದವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ನಾನು ಅಪಘಾತವನ್ನು ನೋಡಿಲ್ಲದೆ ಇದ್ದರೂ ಕೂಡ ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಎಂ.ಎಸ್. – 1 ಮತ್ತು 2 ನೇ ಎದುರುದಾರರ ಪರ ವಕೀಲರಿಂದಃ**

ಅರ್ಜಿದಾರರು ನನ್ನ ಸ್ನೇಹಿತರು ಎಂದರೆ ಸರಿಯಲ್ಲ, ನಮ್ಮ ಗ್ರಾಮದವರು. ಅಪಘಾತವು ಹೆಮ್ಮಿಗೆ ಗ್ರಾಮ ಪಂಚಾಯಿತಿಯ ಬಳಿ ಆಗಿದೆ ಎಂದರೆ ಸರಿ. ಅರ್ಜಿದಾರರು ಹೆಮ್ಮಿಗೆ ಗ್ರಾಮದಿಂದ ಹೆಮ್ಮಿಗೆ ಗೇಟಿಗೆ ಅಪಘಾತದ ವೇಳೆಗೆ ಹೋಗುತ್ತಿದ್ದರು. 1 ನೇ ಎದುರುದಾರರು ಆ ಗೇಟಿನಿಂದ ಹೆಮ್ಮಿಗೆ ಗ್ರಾಮಕ್ಕೆ ಆ ವೇಳೆಗೆ ಬರುತ್ತಿದ್ದರು.

ಸದರಿ ಪಂಚಾಯಿತಿಯ ಬಳಿಯಿರುವ ರಸ್ತೆಯಲ್ಲಿ ಉಬ್ಬು ಇದೆ ಎಂದರೆ ಸರಿಯಲ್ಲ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಪಂಚಾಯಿತಿಯ ಬಳಿಯ ಜಾಗ ಜನನಿಬಿಡ ಜಾಗ ಎಂದರೆ ಸರಿಯಲ್ಲ. ಆ ಗೇಟಿನಿಂದ ಪಂಚಾಯಿತಿಗೆ ಬರುವ ರಸ್ತೆಯಲ್ಲಿ ತಿರುವುಗಳು ಇವೆ ಎಂದರೆ ಸರಿಯಲ್ಲ. ನಿಪಿ.4 ರ ಕಚ್ಚಾ ನಕಾಶೆಯಲ್ಲಿ ರಸ್ತೆಯಲ್ಲಿ ತಿರುವು ಇರುವುದು ಕಂಡು ಬರುತ್ತದೆ ಎಂದರೆ ಅಪಘಾತ ಸ್ಥಳದಿಂದ ದೂರದಲ್ಲಿ ತಿರುವು ಇದೆ. ಅದೇ ರೀತಿ ಅದರಲ್ಲಿ ರಸ್ತೆಯ ಅಕ್ಕಪಕ್ಕ ಮರಗಳು ಇರುವುದು ಕಂಡು ಬರುತ್ತವೆ ಎಂದರೆ ಸರಿಯಲ್ಲ. ಆ ಬಗ್ಗೆ ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಎದುರುದಾರ ತನ್ನ ಮೋಟಾರ್ ಸೈಕಲ್‌ನ್ನು ನಿದಾನವಾಗಿ ಚಲಾಯಿಸಿದ್ದರು ಎಂದರೆ ಸರಿಯಲ್ಲ. ಅರ್ಜಿದಾರನ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ತಿ.ನರಸೀಪುರ.**